ಅಸಲು ದಾವಾ ಸಂಖ್ಯೆ 208/2018

ಪಿ ಡಬ್ಲ್ಯೂಃ 1

**ದಿನಾಂಕ :** 02.03.2026**ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ – ಪ್ರತಿವಾದಿ ಪರ ಶ್ರೀ ಯು ಪಿ ವಕೀಲರಿಂದಃ**

ನಿಪಿ–17 ಟ್ಯಾಕ್ಸ್ ಅಸೆಸ್ ಮೆಂಟ್ ರಿಜಿಸ್ಟರ್ ಆಗಿರುತ್ತದೆಯೇ ಹೊರತು ಖಾತಾ ದಾಖಲಾತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–27 ರ ದಾಖಲಾತಿಯ ಸ್ವಾಧೀನತೆಯ ಕಾಲಂ ನಲ್ಲಿ, ಯಾವ ರೀತಿ ಸ್ವಾಧೀನತೆ ಹೊಂದಿರುತ್ತಾರೆ ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಮುನ್ಸಿಪಾಲಿಟಿ ಕಛೇರಿಯಿಂದ ಸ್ಥಳಕ್ಕೆ ಬಂದು ಆ ನಂತರ ಇ–ಖಾತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಮತ್ತು ನನ್ನ ಚಿಕ್ಕಮ್ಮ ಇಬ್ಬರೂ ಇದ್ದೆವು. ನಿಪಿ–27 ರಲ್ಲಿ ನಮೂದು ಇರುವ ಚೆಕ್ಕು ಬಂದಿ ಹಾಗೂ ವಾದಪತ್ರದಲ್ಲಿ ನಮೂದು ಇರುವ ಉತ್ತರ ಮತ್ತು ದಕ್ಷಿಣ ದಿಕ್ಕುಗಳ ವಿವರ ಒಂದಕ್ಕೊಂದು ತಾಳೆ ಇರುವುದಿಲ್ಲ

ಅಸಲು ದಾವಾ ಸಂಖ್ಯೆ 208/2018

ಪಿ ಡಬ್ಲ್ಯೂ: 1

ಎಂದರೆ ಸರಿಯಲ್ಲ. ಸರಿ ಇರುತ್ತದೆ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕು ಹಾಗೂ ವಿವರಗಳು ಗೊತ್ತಿಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-27 ರಲ್ಲಿ ಖಾತೆ ಸಂಖ್ಯೆ 18/7 ಇದೆ ಎಂದರೆ ಸರಿ. ನಿಪಿ-18 ರಿಂದ ನಿಪಿ-26 ದಾಖಲಾತಿಗಳಲ್ಲಿ ಸ್ವತ್ತಿನ ಐ ಡಿ ಸಂಖ್ಯೆ 712 ಎಂದು ನಮೂದು ಇದೆ ಎಂದರೆ ಸರಿ. ನಿಪಿ-10 ಪಹಣಿ ಪತ್ರಿಕೆಯಲ್ಲಿ, ಸ್ವಾಧೀನದಾರರ ಹೆಸರು ನಮೂದು ಇದೆ ಎಂದರೆ ಸಾಕ್ಷಿಯು ಅವರು ಸೃಷ್ಟಿಸಿಕೊಂಡಿರುತ್ತಾರೆ ಹಾಗಾಗಿ ಅದನ್ನು ತೆಗದುಹಾಕಲಾಗಿದೆ ಎಂದು ನುಡಿಯುತ್ತಾರೆ. ನಿಪಿ-10 ದಾಖಲಾತಿಯನ್ನು ಪ್ರತಿವಾದಿಗಳು ತಮ್ಮ ಹೆಸರಿಗೆ ಸೃಷ್ಟಿಸಿಕೊಂಡಿರುತ್ತಾರೆ ಎಂಬುದಾಗಿ ತಿಳಿಸಿದ್ದು, ಆ ಬಗ್ಗೆ ಕಂದಾಯ ಅಧಿಕಾರಿಗಳಿಗೆ ಅರ್ಜಿಯನ್ನು ದಾಖಲುಮಾಡಲಾಗಿತ್ತಾ ಎಂದರೆ ಸಾಕ್ಷಿಯು ಅರ್ಜಿ ದಾಖಲು ಮಾಡಿದ್ದೆ ಅದು ಪಟ್ಟಣ ಪಂಚಾಯತಿಗೆ ಬರುವ ಕಾರಣ ಅರ್ಜಿಯನ್ನು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ಸರ್ವೆ ನಂಬರ್ 100/3 ರ ಸ್ವತ್ತು ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಬರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-18 ರಿಂದ ನಿಪಿ-26 ದಾಖಲಾತಿಗಳನ್ನು ಒಂದೇ ದಿನ ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ